3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS 157/2018** **PW- 1**

ದಿಃ **12.03.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟಿಸವಾಲುಃ ಪ್ರತಿವಾದಿ ನಂ.1 ಪರ ವಕೀಲರಿಂದಃ**

ನಾನು ಎಲ್ಲ ವಾದಿಯರ ಪರವಾಗಿ ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿರುತ್ತೇನೆ. ಯಲ್ಲಪ್ಪ ಪರಪ್ಪ ನಡೂರ ನನ್ನ ತಂದೆಯಾಗಬೇಕು. ನಾನು ವಾದ ಪತ್ರದಲ್ಲಿ ಖರೀದಿ ಪತ್ರದ ಬಗ್ಗೆ ಪರಿಹಾರ ಕೇಳಿಲ್ಲ ಆದರೆ ದಾವಾ ಆಸ್ತಿಯಲ್ಲಿ ಹಿಸ್ಸೆ ಕೇಳಿರುತ್ತೇನೆ. ವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಾಗುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇದೆ. ನಿಪಿ.8 ರ ಪ್ರಕಾರ ನಾವು ಯಾವದೇ ಹೊಲ ಖರೀದಿ ಮಾಡಿಲ್ಲ. ಈ ದಾವೆಯಲ್ಲಿ ನಮ್ಮ ಹಿಸ್ಸೆಯನ್ನು ಹೊರತುಪಡಿಸಿ ಬೇರೆ ಪರಿಹಾರ ಕೇಳಿಲ್ಲ.

4. ಕಲ್ಲಪ್ಪ ನನ್ನ ಚಿಕ್ಕಪ್ಪ. ವಾದಿ ನಂ.5 ಕಲ್ಲಪ್ಪನ ಹೆಂಡತಿ ಹಾಗೂ ವಾದಿ ನಂ.6 ಕಲ್ಲಪ್ಪ ಇವರ ಮಗ ಆಗಬೇಕು. ವಾದಿ ನಂ.10 ನನ್ನ ತಾಯಿ. ವಾದಿ ನಂ.11 ನಾನು. ವಾದಿ ನಂ.1 ನನ್ನ ದೊಡ್ಡಮ್ಮ ಆಗಬೇಕು. ವಾದಿ ನಂ.2 ರಿಂದ 4 ನನ್ನ ದೊಡ್ಡಪ್ಪನ ಮಕ್ಕಳು.

5. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದು ಬರೆಯಲು ಬರುತ್ತದೆ. ದಾವಾ ಆಸ್ತಿ ಸರ್ವೆ ನಂ.384 ಅದು 2 ಎಕರೆ 32 ಗುಂಟೆ ಆಗಿತ್ತು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಯಾರಿಂದ ಹೇಗೆ ಬಂತು ಎಂದು ತಿಳಿದುಕೊಂಡೆ ಈ ದಾವೆ ಸಲ್ಲಿಸಿರುತ್ತೇವೆ. ದ್ಯಾಮವ್ವ ಕೋಂ. ಯಲ್ಲಪ್ಪ ನಡೂರ ಎಂದರೆ ನಿಮ್ಮ ಅಜ್ಜಿ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದನಲ್ಲಿ ನಮ್ಮ ವಂಶಾವಳಿ ಬಗ್ಗೆ ಯಾವದೇ ಮಾಹಿತಿ ನೀಡಿಲ್ಲ. ನನ್ನ ಅಜ್ಜನ ಹೆಸರು ಪರಪ್ಪ. ಪರಪ್ಪನ ತಂದೆ ಹೆಸರು ಯಲ್ಲಪ್ಪ ಎಂದರೆ ಸರಿ. ಯಲ್ಲಪ್ಪ ಇವರು ದ್ಯಾಮವ್ವನ ಗಂಡ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನಮ್ಮ ಮನೆತನದ ಪೂರ್ವಜರ ಬಗ್ಗೆ ಮಾಹಿತಿ ಪಡೆದುಕೊಂಡು ದಾವೆ ಸಲ್ಲಿಸಿರುತ್ತೇನೆ. ನನ್ನ ಅಜ್ಜನ ತಂದೆ

ಯಲ್ಲಪ್ಪ ಅವರ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿ ಈ ಹಂತದಲ್ಲಿ ಸರ್ವೆ ನಂ.384/1 ಎ ಬಗ್ಗೆ ಆದ ಮ್ಯುಟೇಶನ್ ಎಂಟ್ರಿಯನ್ನು ಓದಿ ಹೇಳಲಾಗಿ ಸಾಕ್ಷಿ ಅದನ್ನು ಒಪ್ಪಿದ್ದು ಸದರಿ ದಾಖಲೆ ಜರಾಕ್ಸ ಪ್ರತಿ ಇದ್ದು ಸದರಿ ದಾಖಲೆಯ ಧೃಡಿಕೃತ ನಕಲನ್ನು ಹಾಜರುಪಡಿಸಿದ ನಂತರ ನಿಶಾನೆಯನ್ನಾಗಿ ಗುರುತಿಸಲು ಆದೇಶಿಸಿಲಾಯಿತು. ಸದರಿ ದಾಖಲೆ ಪ್ರಕಾರ ಯಲ್ಲವ್ವ ಪಕ್ಕಿರಪ್ಪ ನಡೂರ ಇವರ ಬಕ್ಷಿಸ ಪತ್ರ ಮಾಡಿರುವ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ಸರ್ವೆ ನಂ.384/1 ಎ ಬಗ್ಗೆ ದಿಃ 01.03.1962 ರ ಅರ್ಜಿಯ ಮೇರೆಗೆ ಆದ ಮ್ಯುಟೇಶನ್ ಎಂಟ್ರಿಯನ್ನು ಓದಿ ಹೇಳಲಾಗಿ ಸಾಕ್ಷಿ ಅದನ್ನು ಒಪ್ಪಿದ್ದು ಸದರಿ ದಾಖಲೆ ಜರಾಕ್ಸ ಪ್ರತಿ ಇದ್ದು ಸದರಿ ದಾಖಲೆಯ ಧೃಡಿಕೃತ ನಕಲನ್ನು ಹಾಜರುಪಡಿಸಿದ ನಂತರ ನಿಶಾನೆಯನ್ನಾಗಿ ಗುರುತಿಸಲು ಆದೇಶಿಸಿಲಾಯಿತು. ಸದರಿ ದಾಖಲೆ ಪ್ರಕಾರ ಯಲ್ಲಪ್ಪ ತಂದೆ ಪರಪ್ಪ ನಡೂರ ಇವರು ಮೃತ ಪಟ್ಟ ನಂತರ ಅವರ ವಾರಸುದಾರರ ಹೆಸರು ದಾಖಲಿಸಲು ಆದೇಶವಾಗಿದೆ ಎಂದರೆ ನಿಜ. ಮೇಲೆ ಹೇಳಿದ ಮೊದಲನೆ ಮ್ಯುಟೇಶನ್ ಎಂಟ್ರಿ ಪ್ರಕಾರ ದ್ಯಾಮವ್ವ ನಡೂರ ಇವರು ದಾವಾ ಆಸ್ತಿಯ ಮಾಲಿಕರಾಗಿದ್ದರು ಎಂದರೆ ಸರಿ. ಅವರು ತೀರಿಕೊಂಡ ನಂತರ ಅವರ ಮಕ್ಕಳಾದ ಪರಪ್ಪ ಮತ್ತು ಯಲ್ಲಪ್ಪ ಇವರ ಹೆಸರಿನಲ್ಲಿ ವಾರಸಾ ಆಯಿತು ಎಂದರೆ ಸರಿ. ಪರಪ್ಪ ತೀರಿಕೊಂಡ ನಂತರ ಅವರ ಹಿಸ್ಸೆ ನನ್ನ ತಂದೆ ಹಾಗೂ ಅವರ ಸಹೋದರರಿಗೆ ಬಂದಿರುತ್ತದೆ. ಪರಪ್ಪ ಹಾಗೂ ನನ್ನ ದೊಡ್ಡಪ್ಪನಿಗೆ ದಾವಾ ಆಸ್ತಿ ಒಂದೇ ವಾರಸಾ ಪ್ರಕಾರ ಬಂದ ಆಸ್ತಿ ಎಂದರೆ ಸರಿ. ಈ ಆಸ್ತಿ ದ್ಯಾಮವ್ವ ನಿಂದ ಬಂದಿದ್ದು ನಮ್ಮ ಮನತೆನತಕ್ಕೆ ಪಿತ್ರಾರ್ಜಿತವಾಗಿ ಯಾವುದೇ ಆಸ್ತಿಗಳು ಇರುವುದಿಲ್ಲ. ಪಿತ್ರಾರ್ಜಿತ ಆಸ್ತಿ ಏನು ಎಂದು ನನಗೆ ಗೊತ್ತಿಲ್ಲ. 4 ತಲೆಮಾರಿನಿಂದ ಬಂದ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎನ್ನುತ್ತಾರೆ ಎಂದರೆ ಸರಿ. ಯಲ್ಲಪ್ಪ ಮತ್ತು ಅವರ ಸಹೋದರನಿಗೆ ದಾವಾ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ದಾಾ ಆಸ್ತಿಯನ್ನು ಯಲ್ಲಪ್ಪ ಪ್ರತಿವಾದಿ ನಂ.1 ಇವರಿಗೆ ಖರೀದಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿ ನೀಡಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮನೆಯ ಸದಸ್ಯರು ಹೇಗೆ ಸಹಿ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ನಾನು ವಾದಿಯರ ಸಹಿಗಳನ್ನು ಗುರುತಿಸಬಹುದು. ವಾದಪತ್ರದ ಪುಟ ಸಂಖ್ಯೆ 7 ರಲ್ಲಿ ಅನುಕ್ರಮ ಸಂಖ್ಯೆ 6 ರ ಸಹಿ ಉದಯ ಕೆ ನಡೂರ ಎಂಬುವರ ಸಹಿ ಆಗಿರುತ್ತದೆ. ನಿಪಿ.8 ರಲ್ಲಿ ಉದಯ ಕೆ ನಡೂರ ಎಂದು ಬರೆದಿದೆ ಆದರೆ ಅದರಲ್ಲಿರುವ ಸಹಿ ಅವರ ಸಹಿ ಅಲ್ಲ. ವಾದಿ ನಂ.6 ಈ ದಿನ

ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಈ ದಿನ ನಾನು ಒಬ್ಬನೇ ಮಾತ್ರ ನ್ಯಾಯಾಲಯಕ್ಕೆ ಹಾಜರಿರುತ್ತೇನೆ. ಈ ದಾವೆಯಲ್ಲಿ ನೀವು ವಾದಿ ನಂ.6 ಇವರ ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿ ನಾನು ಮಾಡಿಸುವುದಿಲ್ಲ ಎಂದು ನುಡಿಯುತ್ತಾರೆ. ವಾದಿ ನಂ.6 ಬಂದು ಸಾಕ್ಷಿ ನುಡಿದರೆ ನಿಪಿ.8 ರಲ್ಲಿರುವ ಸಹಿ ಯಾರದು ಎಂದು ಗೊತ್ತಾಗುತ್ತದೆ ಎಂದರೆ ಸಾಕ್ಷಿ ಅವರನ್ನು ಕರೆಯಿಸಿ ಕೇಳಬಹುದು ಎಂದು ನುಡಿಯುತ್ತಾರೆ. ವಾದಿ ನಂ.6 ನ್ಯಾಯಾಲಯಕ್ಕೆ ಸತ್ಯಾಂಶ ಗೊತ್ತಾಗುತ್ತದೆ ಎಂದರೆ ಸರಿ. ಈ ದಾವೆಯಲ್ಲಿ ನನ್ನ ತಂದೆ ವಾದಿ ನಂ.9 ಆಗಿರುತ್ತಾರೆ. ನನ್ನ ದೊಡ್ಡಪ್ಪ ಕಲ್ಲಪ್ಪನ ಸಹಿಯನ್ನು ನನಗೆ ಗುರುತಿಸಲು ಆಗುವುದಿಲ್ಲ. ನನ್ನ ದೊಡ್ಡಪ್ಪ ಕಲ್ಲಪ್ಪ ಈ ದಾವೆಯಲ್ಲಿ ಪಕ್ಷಗಾರಾಗಿರುತ್ತಾರೆ ಆದರೇ ಅವರು ವಾದಿ ನಂಬರ ಎಷ್ಟು ಎಂದು ನಾನು ಗಮನಿಸಿಲ್ಲ.

6. ಪ್ರಸ್ತುತ ದಾವೆಯಲ್ಲಿ ಮಲ್ಲಪ್ಪ ಗದಿಗೆಪ್ಪ ಹಾಗೂ ಶ್ರೀನಿವಾಸ ಮಾನೆ ಎಂಬುವರ ಮೇಲೆ ನಾನು ಈ ದಾವೆ ಸಲ್ಲಿಸಿರುತ್ತೇನೆ. ಸದರಿ ಮಲ್ಲಪ್ಪ ಗದಿಗೆಪ್ಪ ಇವರ ಅಡ್ಡಹೆಸರು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ಇವರು ಆಸ್ತಿ ಖರೀದಿಸಿದ ನಂತರ ಅದನ್ನು ಯಾರಿಗೆ ಖರೀದಿಗೆ ನೀಡಿದರು ಎಂದು ವಾದಪತ್ರದಲ್ಲಿ ಬರೆದಿಲ್ಲ. ಕಲ್ಲಪ್ಪ ಎಷ್ಟನೆ ಪ್ರತಿವಾದಿ ಎಂದು ನಾನು ಅಷ್ಟು ಗಮನಿಸಿಲ್ಲ. ನನ್ನ ತಂದೆ ಹೆಬ್ಬೆರಳಿನ ಗುರುತು ಹಾಕುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಿಃ 30.07.015 ರ ಜಿಪಿಎ ನ ಜರಾಕ್ಸ ಪ್ರತಿಯನ್ನು ತೋರಿಸಿ ಅದರಲ್ಲಿ ನಿಮ್ಮ ಸಹಿ ಇದೆ ಎಂದು ಕೇಳಲಾಗಿ ಸಾಕ್ಷಿ ನನ್ನ ಹಾಗೆಯೆ ಸಹಿ ಇದೆ ಆದರೆ ನಾನು ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪಿ.8 ಖರೀದಿ ಪತ್ರ ನೊಂದಣಿ ಮಾಡಿಕೊಳ್ಳುವಾಗ ಹಾಜರುಪಡಿಸಿದ ಎಲ್ಲ ದಾಖಲೆಗಳನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಕಲ್ಲಪ್ಪ ಇವರು ಪ್ರತಿವಾದಿ ನಂ.1 ಇವರಿಗೆ ಅಧಿಕಾರ ಪತ್ರದ ಆದಾರದ ಮೇಲೆ ದಾವಾ ಆಸ್ತಿಯನ್ನು ಖರೀದಿಗೆ ನೀಡಿರುತ್ತಾರೆ ಎಂದರೆ ಇಲ್ಲ. ಪ್ರತಿವಾದಿ ನಂ.1 ಇವರು ಪ್ರತಿವಾದಿ ನಂ.2 ಇವರಿಗೆ ದಾವಾ ಆಸ್ತಿ ವಿಷಯವಾಗಿ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಕಲ್ಲಪ್ಪ ಇವರು ಅಧಿಕಾರ ಪತ್ರದ ಆದಾರದ ಮೇಲೆ ದಾವಾ ಆಸ್ತಿ ವಿಷಯವಾಗಿ ಏನೇನು ವ್ಯವಹಾರ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.2 ಇವರ ಹೆಸರಿಗೆ ಖರೀದಿ ಪತ್ರ ಆಗುವ ಮುಂಚೆ ಖರೀದಿ ಪತ್ರ ಆದಾರದ ಮೇಲೆ ಪ್ರತಿವಾದಿ ನಂ.1 ಇವರ ಹೆಸರು ದಾವಾ ಆಸ್ತಿ ಉತಾರದಲ್ಲಿ ದಾಖಲಾಗಿತ್ತು ಎಂದರೆ ಸಾಕ್ಷಿ ಇಲ್ಲ ಎಂದು

ನುಡಿಯುತ್ತಾರೆ. ಆಸ್ತಿಯ ಮಾಲಿಕರ ಹೆಸರು ಉತಾರದಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಈಗ ಬ್ಲಾಕ್ ಸಂಖ್ಯೆ 820/2 ರ ಪಹಣಿಯನ್ನು ತೋರಿಸಿ ಅದರ ಪ್ರಕಾರ ಪ್ರತಿವಾದಿ ನಂ.1 ಇವರ ಹೆಸರು ಮಾಲಿಕ ಹಾಗೂ ಕಬ್ಜೆದಾರು ಎಂದು ತೋರಿಸಲಾಗಿದೆ ಎಂದರೆ ಸರಿ. ಸದರಿ ಪಹಣಿಯನ್ನು ಸಾಕ್ಷಿ ಒಪ್ಪಿದ್ದು ನಿಡಿ.4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಬ್ಲಾಕ್ ಸಂಖ್ಯೆ 820/1 ರ ಪಹಣಿಯನ್ನು ತೋರಿಸಿ ಅದರ ಪ್ರಕಾರ ಪ್ರತಿವಾದಿ ನಂ.1 ಇವರ ಹೆಸರು ಮಾಲಿಕ ಹಾಗೂ ಕಬ್ಜೆದಾರು ಎಂದು ತೋರಿಸಲಾಗಿದೆ ಎಂದರೆ ಸರಿ. ಸದರಿ ಪಹಣಿಯನ್ನು ಸಾಕ್ಷಿ ಒಪ್ಪಿದ್ದು ನಿಡಿ.5 ಎಂದು ಗುರುತಿಸಲಾಯಿತು.

7. ನಾವು ಕೇಶ್ವಾಪೂರದಲ್ಲಿ ಮನೆಯನ್ನು ಕಟ್ಟಿಲ್ಲ. ದಾವಾ ಆಸ್ತಿ ನಮ್ಮ ಕಬ್ಜೆಯಲ್ಲಿಲ್ಲ ಎಂದರೆ ಸರಿ. ಪ್ರತಿವಾದಿ ನಂ.2 ಖರೀದಿ ಪತ್ರದ ಆದಾರದ ಮೇಲೆ ದಾವಾ ಆಸ್ತಿಯ ಕಬ್ಜೆಯಲ್ಲಿ ಮಾಲಿಕನಾತೆಯಿಂದ ಸಾಗುಮಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಈಗ ಯಾರು ಸಹ ಸಾಗುವಳಿ ಮಾಡುತ್ತಿಲ್ಲ. ಪ್ರತಿವಾದಿ ನಂ.1 ಮತ್ತು 2 ಇವರಿಂದ ದಾವಾ ಆಸ್ತಿಯ ಕಬ್ಜೆಯನ್ನು ಕೊಡಿಸಬೇಕು ಎಂದು ನಾವು ಪರಿಹಾರ ಕೇಳಿರುತ್ತೇವೆ. ಕಲ್ಲಪ್ಪ ತಂದೆ ಪರಪ್ಪ ತೀರಿಕೊಂಡಿರುತ್ತಾರೆ. ಅವರು ಯಾವ ಇಸವಿಯಲ್ಲಿ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಕಲ್ಲಪ್ಪ ಇವರು ತೀರಿಕೊಂಡ ಬಗ್ಗೆ ನ್ಯಾಯಾಲಯಕ್ಕೆ ಅವರ ಮರಣ ಪ್ರಮಾಣ ಪತ್ರ ಸಲ್ಲಿಸಿರುತ್ತೇವೆ ಆದರೆ ವಾದಪತ್ರದಲ್ಲಿ ನಮೂದಿಸಿಲ್ಲ. ಕಲ್ಲಪ್ಪ ಹಾಗೂ ನನ್ನ ತಂದೆ ಕೂಡಿಯೆ ಇದ್ದರು ಎಂದರೆ ಸಾಕ್ಷಿ ನಾವು ಚಿಕ್ಕವರಿದ್ದಾಗ ಕೂಡಿಕೊಂಡು ಇದ್ದರು ಎಂದು ನುಡಿಯುತ್ತಾರೆ. ನಾವೆಲ್ಲ ಕೇಶ್ವಾಪೂರದಲ್ಲಿ ಒಂದೇ ಮನೆಯಲ್ಲಿ ಇದ್ದೆವು.

8. ನಿಪಿ.5 ದಾಖಲೆಯನ್ನು ನಾನು ಹಾಜರುಪಡಿಸಿಲ್ಲ. ನಾನು ಯಾವ ಯಾವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಕಲ್ಲಪ್ಪ ಇವರು ಪ್ರತಿವಾದಿ ನಂ.1 ಇವರಿಗೆ ಮಾಡಿಕೊಟ್ಟ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 2015 ರಲ್ಲಿ ಕಲ್ಲಪ್ಪ ದಾವಾ ಆಸ್ತಿಯನ್ನು ಪ್ರತಿವಾದಿ ನಂ.1 ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಈ ದಾವೆ ಸಲ್ಲಿಸಿದ ನಂತರ ತೀರಿಕೊಂಡಿರುತ್ತಾರೆ ಆದರೆ ಅವರು ತೀರಿಕೊಂಡ ಇಸವಿ ನನಗೆ ಗೊತ್ತಿಲ್ಲ. ನನ್ನ ತಂದೆ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿಸವಾಲಿಗೆ ಕಾಲಾವಕಾಶ ಕೇಳಿದ್ದು ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**(**ಶ್ರೀಮತಿ ದೀಪಾ ಜಿ ಮನೇರಕರ**)**

**3** ನೇ ಅಧಿಕ ಹಿ**.**ದಿ**.**ನ್ಯಾ**.**ಹುಬ್ಬಳ್ಳಿ**.**